ಬರೆಯುವಾಗ ನಾನು ಎದುರಿಸುವ ಸಂಕಷ್ಟಗಳಲ್ಲೊಂದು ಓದುಗನಿಗೆ ಕೃತಿಯಲ್ಲಿನ ಭಾಷೆ ಹೇಗೆ ತಲುಪುತ್ತದೆ ಎನ್ನುವುದು. ಪದಗಳ ಕುರಿತು, ಅದು ಹೇಳದೆ ಉಳಿಸಿಬಿಡುವ ಮೌನ, ಪದಗಳ ಲಯ ಇತ್ಯಾದಿಗಳ ಕುರಿತು ಎಚ್ಚರದಿಂದ ಇರಬೇಕಾಗುತ್ತದೆ. ನೀವು ಬರೆಯದೆ ಬಿಟ್ಟದ್ದು ನೀವು ಬರೆದಿರುವುದಕ್ಕೆ ಶಕ್ತಿ ತುಂಬುತ್ತಿರುತ್ತದೆ.



ಇಲ್ಲ. ಓದುಗಳಾಗಬೇಕೆಂದುಕೊಂಡಿದ್ದೆ. ನಾನು ಬರೆಯಬೇಕೆಂದಿರುವುದೆಲ್ಲ ಈಗಾಗಲೇ ಬರೆದಾಗಿದೆ ಅಂದುಕೊಂಡಿದ್ದೆ. ಆ ತರಹದ ಪುಸ್ತಕ ಇಲ್ಲ ಅಂದುಕೊಂಡು ಮೊದಲನೆಯ ಪುಸ್ತಕ ಬರೆದಿದ್ದು. ನಾನು ಬಹಳ ಒಳ್ಳೆಯ ಓದುಗಳು. ಓದುವುದೆಂದರೆ ಬಹಳ ಇಷ್ಟ. ನಿಜಕ್ಕೂ ನಾನು ಮಾಡುವುದು ಅದನ್ನೇ. ಜನ ನನಗಾಗಿ ನಾನು ಬರೆಯುತ್ತೇನೆ ಎನ್ನುತ್ತಾರೆ. ಅದು ಭಯಂಕರವಾದ ಆತ್ಮರತಿ ಅನ್ನಿಸುತ್ತದೆ. ನಿಮ್ಮ ಪುಸ್ತಕವನ್ನು ವಿಮರ್ಶಾತ್ಮಕ ಅಂತರದೊಂದಿಗೆ ಓದುವುದು ನಿಮಗೆ ತಿಳಿದಿದ್ದರೆ ನೀವು ಉತ್ತಮ ಲೇಖಕಿ/ಕ, ಸಂಪಾದಕಿ/ಕ ಆಗಬಲ್ಲಿರಿ. ಕ್ರಿಯೆಟಿವ್ ರೈಟಿಂಗ್ ಕಲಿಸುವಾಗ ಯಾವಾಗಲೂ ನಿಮ್ಮ ಬರವಣಿಗೆಯಿಂದ ದೂರ ನಿಂತು ಅದನ್ನು ವಿಮರ್ಶಾತ್ಮಕವಾಗಿ ನೋಡುವುದನ್ನು ಕಲಿಯಬೇಕು ಎಂದು ಹೇಳುತ್ತಿರುತ್ತೇನೆ. ನಿಮ್ಮದೇ ಬರವಣಿಗೆಯನ್ನು ದೂರನಿಂತು ಅದೇ ಮೊದಲ ಸಲವೇನೋ ಎನ್ನುವಂತೆ ಓದಬೇಕು. ನಿಮ್ಮದೇ ಬರವಣಿಗೆಯ ಮೋಹಕ್ಕೆ ಬೀಳಬಾರದು.

◆ ಬರೆಯುವಾಗ ನಿಮ್ಮ ಓದುಗರು ನಿಮ್ಮ ಮನಸ್ಸಿನಲ್ಲಿ ಇರುತ್ತಾರೆಯೇ?

ಇಲ್ಲ. ಎಲ್ಲಾದರೂ ಏನಾದರೂ ಅನುಮಾನ ಬಂದರೆ ನನ್ನ ಪಾತ್ರಗಳೇ ತಮ್ಮ ಬದುಕಿನ ಸತ್ಯಾಸತ್ಯತೆ ಕುರಿತು ಮಾತಾಡುತ್ತವೆ. ನನ್ನ ಕೃತಿಯಾದ್ದರಿಂದ ಅದರ ತಪ್ಪುಒಪ್ಪುಗಳ ಜವಾಬ್ದಾರಿ ನನ್ನದೇ. ತಪ್ಪು ಮಾಡುವುದು ತಪ್ಪಲ್ಲ. ತಪ್ಪು ಮಾಡುತ್ತಿದ್ದಾಗಲೂ ಅದೇ ಸರಿ ಅಂದುಕೊಳ್ಳುವುದು ತಪ್ಪು. ಬೇಸಿಗೆಯಲ್ಲೊಮ್ಮೆ ಹೀಗೆ ಕೂತು ಸುಮಾರು ಐವತ್ತು ಪುಟಗಳನ್ನು ಬರೆದಿದ್ದೆ. ಮತ್ತೆ ಚಳಿಗಾಲದವರೆಗೂ ಅದನ್ನು ಮುಟ್ಟಲಾಗಿರಲಿಲ್ಲ. ಬರೆದಿರುವುದು ಬಹಳ ಅದ್ಭುತವಾಗಿದೆ ಅಂದುಕೊಂಡಿದ್ದೆ. ಆದರೆ, ಓದಲು ಶುರು ಮಾಡಿದಾಗ ಅದೆಷ್ಟು ಕೆಟ್ಟದಾಗಿ ಬರೆದಿದ್ದೆ ಎನ್ನುವುದು ಅರಿವಾಗಿ ಗಾಬರಿಯಾಯಿತು.

◆ ನಿಮ್ಮ ವಿಚ್ಛೇದನದ ಬಳಿಕ ಒಂಟಿತನವನ್ನು ಮೀರಲು ಬರೆಯಲು ಆರಂಭಿಸಿದಿರಿ ಅಂತ ಕೇಳಿದೆ. ಹೌದೇ? ಬರೆಯಲು ಇನ್ನೂ ಬೇರೆ ಏನಾದರೂ ಕಾರಣಗಳಿವೆಯೇ?

ಇರಬಹುದು. ಅದೊಂದೇ ಕಾರಣಕ್ಕೆ ಬರೆಯಲು ಶುರು ಮಾಡಿದೆನೋ ಅಥವ ನಾನು ಊಹಿಸಿರದ ಇನ್ನಿತರ ಕಾರಣಗಳಿಂದ ಶುರು ಮಾಡಿದೆನೋ ಗೊತ್ತಿಲ್ಲ. ಒಟ್ಟಿನಲ್ಲಿ ಬರೆಯದೆ ಇಲ್ಲಿರಲಾರೆ ಅನ್ನಿಸಿದ್ದಂತೂ ಹೌದು.